ಅಸಲು ದಾವಾ ನಂ. 17/2021 ಡಿಡಬ್ಲೂ : 2

ದಿನಾಂಕಃ 10-07-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ವಾದಿಯ ಪರವಾಗಿಃ ಶ್ರೀ ಎನ್ ಎಮ್ ಎನ್ ವಕೀಲರಿಂದಃ**

6. ವಾದಿಯ ತಾಯಿಯ ಹೆಸರು ಪ್ರಭಾವತಿ ಎಂದರೆ ಸರಿ . ನಾನು ಪ್ರಭಾವತಿಯ ಸಹೋದರ ದಾಮೋದರ ಶಿವರಾಮ ಅಡಿಮೂಳೆ ರವರ ಮಗ ಎಂದರೆ ಸರಿ . ಪ್ರಭಾವತಿಯವರ ಗಂಡನ ಹೆಸರು ದತ್ತಾತ್ರೇಯ ಎಂದರೆ ಸರಿ .

7. 1 ನೇ ವಾದಿ ಹಾಗೂ ಅವರ ಸಹೋದರ ಯೋಗರಾಜ ದಾಂಡೇಲಿಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ . ವಾದಿ ಹಾಗೂ ಅವರ ಸಹೋದರ ಯೋಗರಾಜ ಮೊದಲು ಒಟ್ಟಿಗೆ ಇದ್ದರು , ಈಗ ಬೇರೆ ಬೇರೆ ವಾಸವಾಗಿದ್ದಾರೆ . ಎಷ್ಟು ವರ್ಷಗಳಿಂದ ಬೇರೆ ಬೇರೆ ವಾಸವಾಗಿದ್ದಾರೆ ಗೊತ್ತಿಲ್ಲ . ಈಗ ವಾದಿ ದಾಂಡೇಲಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಗೊತ್ತಿಲ್ಲ. ಎಷ್ಟು ವರ್ಷಗಳಿಂದ ಬಾಡಿಗೆ ಮನೆಯಲ್ಲಿ ವಾಸವಾಗಿದ್ದಾರೆ ಗೊತ್ತಿಲ್ಲ .

8. 1 ನೇ ಪ್ರತಿವಾದಿ ಯೋಗರಾಜ 1 ನೇ ವಾದಿಯ ಹಿರಿಯ ಸಹೋದರ ದಾಂಡೇಲಿಯ ಮೂಲ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ . ನನ್ನ ಅತ್ತೆ ಪ್ರಭಾವತಿಯವರಿಗೆ ಮೂತ್ರಪಿಂಡದ ಕಾಯಿಲೆ ಇತ್ತು ಎಂದರೆ ಸರಿ . 2 ನೇ ವಾದಿ ಗೋವಾದಲ್ಲಿ ಕೊಂಕಣ ರೇಲ್ವೆಯಲ್ಲಿ ಕೆಲಸ ಮಾಡಿಕೊಂಡಿದ್ದಾರೆ ಎಂದರೆ ಸರಿ . 3 ನೇ ವಾದಿ ವಿವಾಹವಾಗಿ ಮುಂಬಯಿನಲ್ಲಿ ವಾಸವಾಗಿದ್ದಾರೆ ಎಂದರೆ ಸರಿ . 2006 ರಿಂದ ಪ್ರಭಾವತಿಯವರಿಗೆ ಕಿಡ್ನಿ ಕಾಯಿಲೆ ಇತ್ತು ಎಂದರೆ ಸಾಕ್ಷಿ ಇರಬಹುದು ಎಂದು ನುಡಿದಿರುತ್ತಾರೆ . ಕಿಡ್ನಿ ಕಾಯಿಲೆಯಿಂದ ಅವರು ಡಯಾಲಿಸ್ ಗೆ ಒಳಗಾಗುತ್ತಿದ್ದರು ಎಂದರೆ ಇರಬಹುದು . ಡಯಾಲಿಸ್ ಕಾರಣದಿಂದಾಗಿ ಅವರು ಗೋವಾದಲ್ಲಿರುವ 2 ನೇ ವಾದಿಯ ಜೊತೆಗೆ ವಾಸವಾಗಿದ್ದರು ಎಂದರೆ ಸಾಕ್ಷಿ ಸ್ವಲ್ಪ

ದಿನ 1 ನೇ ಪ್ರತಿವಾದಿ , ಸ್ವಲ್ಪ ದಿನ 2 ನೇ ವಾದಿ ಹಾಗೂ ಗೋಕರ್ಣದಲ್ಲಿ ಅವರ ತಂದೆಯ ಮನೆಯಲ್ಲಿ ಇದ್ದರು ಎಂದು ನುಡಿದಿರುತ್ತಾರೆ . ನಾವು ವಾಸವಾಗಿರುವ ಮೂಲ ಮನೆಯಲ್ಲಿ ಇದ್ದರು . ಅದು ಯಾವ ಅವಧಿಯಲ್ಲಿದ್ದರು ನೆನಪಿಲ್ಲ . ಸಾಕ್ಷಿ ಮುಂದುವರೆದು 2008 ರ ನಂತರ ಎಂದು ನುಡಿದಿರುತ್ತಾರೆ . ಎಷ್ಟು ಅವಧಿಯವರೆಗೆ ನಮ್ಮ ಜೊತೆ ಇದ್ದರು ಹೇಳಲು ಆಗುವುದಿಲ್ಲ , ಸ್ವಲ್ಪ ದಿನ ಬರುತ್ತಿದ್ದರು ಮತ್ತು ಹೋಗುತ್ತಿದ್ದರು. ಆ ಸಮಯದಲ್ಲಿ ಅವರು ಡಯಾಲಿಸ್ ಗೆ ಒಳಗಾಗಿದ್ದರೋ ಇಲ್ಲವೋ ಮಾಹಿತಿ ಇಲ್ಲ . ಡಯಾಲಿಸ್ ಗೆ ಹೋಗುವ ವಿಚಾರ ನನಗೆ ತಿಳಿದಿರುತ್ತದೆ . ವಾರದಲ್ಲಿ ಅವರು ಎರಡು ಸಲ ಡಯಾಲಿಸ್ ಗೆ ಒಳಗಾಗಬೇಕಿತ್ತು , ಈ ವಿಚಾರ ನನಗೆ ಗೊತ್ತಿಲ್ಲ . 2 ನೇ ವಾದಿಯ ಮನೆಯಲ್ಲಿ ಇದ್ದಂತಹ ಸಮಯದಲ್ಲಿ ಅವರು ಡಯಾಲಿಸ್ ಗೆ ಒಳಗೊಂಡ ವಿಚಾರ ಗೊತ್ತಿದೆ. ಪ್ರಭಾವತಿಯವರು ದಿಃ 27-08-2016 ಕ್ಕೆ ಗೋವಾದಲ್ಲಿ ತೀರಿಕೊಂಡಿರುತ್ತಾರೆ ಎಂದರೆ ನೆನಪಿಲ್ಲ . ಪ್ರಭಾವತಿಯವರು 2 ನೇ ವಾದಿಯ ಮನೆಯಲ್ಲಿದ್ದಾಗ ಕಿಡ್ನಿ ಕಾಯಿಲೆಯಿಂದ ಮೃತಪಟ್ಟಿರುತ್ತಾರೆ ಎಂದರೆ ಮಾಹಿತಿ ಇಲ್ಲ . ಅವರ ಶವವನ್ನು ಎಲ್ಲಿಂದ ಗೋಕರ್ಣಕ್ಕೆ ತಂದಿದ್ದರು ಗೊತ್ತಿಲ್ಲ. ನಾನು ಪ್ರಭಾವತಿಯವರ ಶವ ಸಂಸ್ಕಾರಕ್ಕೆ ಹೋಗಿಲ್ಲ. ನಾನು ಆ ಸಮಯದಲ್ಲಿ ಮೈಸೂರಿನಲ್ಲಿದ್ದೆ . ಅವರ ಮರಣದ ಬಗ್ಗೆ ನನಗೆ ಹಿರಿಯರು ಮಾಹಿತಿ ಕೊಟ್ಟರು . ಅವರು ಯಾವ ರೀತಿ ತೀರಿಕೊಂಡರು ಆ ಬಗ್ಗೆ ಮಾಹಿತಿ ಕೊಟ್ಟಿಲ್ಲ . ದಾವೆಯನ್ನು ಸಲ್ಲಿಸಿದ ನಂತರ ಪ್ರಭಾವತಿಯವರು ಹೇಗೆ , ಎಲ್ಲಿ ಮರಣ ಹೊಂದಿದರು ತಿಳಿದುಕೊಂಡಿಲ್ಲ ಅದರ ಅವಶ್ಯಕತೆ ಇರಲಿಲ್ಲ . ನಾನು ಈ ಕೇಸಿನ ವಾದ ಪತ್ರವನ್ನು ಓದಿ ತಿಳಿದುಕೊಂಡಿದೆನೆ . ಪ್ರಭಾವತಿಯವರು ವೈಕುಂಠ ಸಮಾರಾಧನೆಯನ್ನು ಗೋಕರ್ಣದಲ್ಲಿ ಮಾಡಿರುತ್ತದೆ ಎಂದರೆ ಸರಿ . ಅವರ ವೈಕುಂಠ ಸಮಾರಾಧನೆಗೆ ನಾನು ಹೋಗಿದೆ . ಆ ಸಮಯದಲ್ಲಿ ವಾದಿಯರು ಹಾಗೂ 1 ನೇ ಪ್ರತಿವಾದಿ ಇದ್ದರು. ಇವರೆಲ್ಲಾ ಸೇರಿ ಶಾಸ್ತ್ರವನ್ನು ನೇರವೇರಿಸಿಕೊಟ್ಟಿರುತ್ತಾರೆ ಎಂದರೆ ಸರಿ . ಯಾವುದೇ ಒಬ್ಬ ವ್ಯಕ್ತಿ ತೀರಿಹೋದರೆ ಅವರ 12 ನೇ ದಿನದ ಕಾರ್ಯ ಮುಗಿದುಹೋಗುವವರೆಗೆ ಯಾವುದೇ ಶುಭ ಕಾರ್ಯವನ್ನು ಮನೆಯಲ್ಲಿ ಮಾಡುವುದಿಲ್ಲ ಎಂದರೆ ಸರಿ .

9. ದಾವಾ ಎ ಯಿಂದ ಹೆಚ್ ವರೆಗಿನ ಸ್ವತ್ತುಗಳು ವಾದಿಯರ ಪಿತ್ರಾರ್ಜಿತ ಆಸ್ತಿಗಳು. ವಾದಿಯ ತಂದೆ ದತ್ತಾತ್ರೇಯ ಇವರಿಂದ ಬಂದಿರುವ ಆಸ್ತಿಗಳು ಎಂದರೆ ಸರಿ . ವಾದಿಯರ ತಂದೆ ತೀರಿಕೊಂಡ ನಂತರ ವಾದಿಗಳು ಹಾಗೂ 1 ನೇ ಪ್ರತಿವಾದಿ ಆಸ್ತಿಗಳಿಗೆ ಹಕ್ಕುದಾರರಾಗಿರುತ್ತಾರೆ ಎಂದರೆ ಸಾಕ್ಷಿ ಕೆಲವೊಂದು ಸ್ವತ್ತುಗಳಿಗೆ 1 ನೇ ಪ್ರತಿವಾದಿ ಅಕುಮೆ ನಾತೆಯಿಂದ ಹಕ್ಕುದಾರರಾಗಿರುತ್ತಾರೆ . ಯಾವ ಯಾವ ಆಸ್ತಿಗಳಿಗೆ ಅಕುಮೆ ನಾತೆಯಿಂದ 1 ನೇ ಪ್ರತಿವಾದಿ ಹಕ್ಕುದಾರರಾಗಿರುತ್ತಾರೆ ಗೊತ್ತಿಲ್ಲ . ಅವು ಯಾವ ಗ್ರಾಮಗಳಿಗೆ ಸಂಬಂಧಪಟ್ಟ ಆಸ್ತಿಗಳು ಎಂಬ ಬಗ್ಗೆ ಮಾಹಿತಿ ಇಲ್ಲ. ನನ್ನ ಹೆಸರಿನಲ್ಲಿ ಸಾಕಷ್ಟು ಪಿತ್ರಾರ್ಜಿತ ಆಸ್ತಿಗಳು ಇವೆ . ಪಹಣಿ ಪತ್ರಿಕೆ , ಮ್ಯುಟೇಶನ್ ಇವುಗಳನ್ನು ನೋಡಿ ಅರ್ಥೈಸಿಕೊಳ್ಳುವ ಸಾಮರ್ಥ್ಯ ನನಗಿದೆ ಎಂದರೆ ಸರಿ . ಅಕುಮೆ ನಾತಯಿಂದ ಬಂದಿರುವ ಆಸ್ತಿಯನ್ನು ದಾಖಲಾತಿಗಳಲ್ಲಿ ಕುಟುಂಬನ ಮುಖ್ಯಸ್ಥನ ಹೆಸರಿನಲ್ಲಿ ತೋರಿಸುತ್ತಾರೆ ಎಂದರೆ ಇರಬಹುದು. ಕುಟುಂಬದ ಸದಸ್ಯರು ಆ ಅಕುಮೆ ಆಸ್ತಿಗೆ ಹಕ್ಕುದಾರರಾಗಿರುತ್ತಾರೆ ಎಂದರೆ ಸರಿ .

( ವಾದಿಯ ವಕೀಲರ ವಿನಂತಿಯ ಮೇರೆಗೆ ಮುಂದುವರಿದ ಪಾಟೀ ಸವಾಲು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.